CC229/20 CW13.

ಪ್ರ .ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**ಸಿ.ಸಿ.ನಂ.229/2020.**

ದಿನಾಂಕ:**27.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಭಾಗ್ಯ | ಚಾಸಾ-11, ಪ್ರಾಸಾ-2 |
| ಗಂಡನ ಹೆಸರು | ರಘು | |
| ವಯಸ್ಸು | 38 | |
| ಉದ್ಯೋಗ | ಗೃಹಿಣಿ | |
| ವಾಸ | ಜಿ. ತಿಮ್ಮಾಪುರ ಗ್ರಾಮ | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತವನ್ನು ನಾನು ನೋಡಿರುವುದಿಲ್ಲ. ನಾನು ಅಪಘಾತ ನೋಡಿರುತ್ತೇ ಎಂದು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಈಗ ನೋಡುತ್ತಿರುವ ದಾಖಲೆಗಳಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆಗಳು ಪೊಲೀಸ್ ನೋಟೀಸು, ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಆಗಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 5 ಎಂದು ಸಾಕ್ಷಿಯ ಸಹಿಗಳನ್ನು ನಿಪಿ3 ಎ, 4 ಎ, 5 ಎ ಎಂದು ಗುರುತಿಸಲಾಯಿತು. ನಿಪಿ 3 ರಿಂದ 5 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸದರಿ ಸಹಿಗಳನ್ನು ಆಸ್ಪತ್ರೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಹಾಕಿರುತ್ತೇನೆ. ಈಗ ನೋಡುತ್ತಿರುವ 2 ಫೋಟೋದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿದರು, ಅದನ್ನು ನಿಪಿ6 ಮತ್ತು 7 ಎಂದು ಗುರುತಿಸಲಾಯಿತು. ನಿಪಿ 6, 7 ನ್ನು ಯಾವಾಗ ಮತ್ತು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲು: ಮಾನ್ಯ ಸ ಸ ಅ ರವರಿಂದ:-</u>

ದಿ:22.05.2019 ರಂದು ನಾನು ಮತ್ತು ನನ್ನ ಗಂಡ ಚಾಸಾ 11 ರವರು ಕೆ ಎ 66 ಹೆಚ್ 7929 ರ ಬೈಕಿನಲ್ಲಿ ಕಡೂರಿಗೆ ಹೋಗಿ ನಮ್ಮ ಕೆಲಸ ಮುಗಿಸಿಕೊಂಡು ವಾಪಾಸು ಊರಿಗೆ ಹೋಗಲು NH-206 ರ ರಸ್ತೆಯ ಎಡ ಬದಿಯಲ್ಲಿ ಹೋಗುತ್ತಿರುವಾಗ ಜಿ ತಿಮ್ಮಾಪುರ ಗ್ರಾಮದ ಗೇಟ್ ಸಮೀಪ ಮಧ್ಯಾಹ್ನ 2 ಗಂಟೆಗೆ ನಮ್ಮ ಎದುರುಗಡೆಯಿಂದ ಬಂದ ಒಂದು ಕಾರಿನ ಚಾಲಕನ ಅತೀ ವೇಗ ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಡಿಕ್ಕಿ ಪಡಿಸಿದರು ಎಂದರೆ ಸರಿಯಲ್ಲ. ಅಪಘಾತದಿಂದ ನಾನು, ಚಾಸಾ 11 ರವರು ರಸ್ತೆಯ ಮೇಲೆ ಬಿದ್ದೆವು ಎಂದರೆ ಸರಿಯಲ್ಲ. ನಂತರ ಕಾರಿನ ಚಾಲಕ ನಿಯಂತ್ರಣ ತಪ್ಪಿ ಎಡಕ್ಕೆ ಎಳೆದುಕೊಂಡು ಪಾನಿಪೂರಿ ಗಾಡಿಗೆ ಡಿಕ್ಕಿ ಪಡಿಸಿಕೊಂಡ ಪರಿಣಾಮ ಪಾನಿಪೂರಿ ಮಾರಾಟ ಮಾಡುತ್ತಿದ್ದ ಹುಡುಗನಿಗೆ ಮತ್ತು ಪಾನಿಪೂರಿ ತಿನ್ನುತ್ತಿದ್ದ ಹುಡುಗನಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ಸದರಿ ಅಪಘಾತದಿಂದ ಚಾಸಾ 11 ರವರ ಬಲ ಮೊಣಕಾಲು, ಬಲ ಕಾಲಿಗೆ ಸಾಮಾನ್ಯ ಗಾಯಗಳಾದವು ಎಂದರೆ ಸರಿಯಲ್ಲ. ಅದೇರೀತಿ ನನಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿ. ಪಾನಿ ಪೂರಿ ತಿನ್ನುತ್ತಿದ್ದ ಹುಡುಗನಿಗೆ ತಲೆಗೆ ಮೈಕೈಗೆ ತೀವ್ರ ಗಾಯವಾಗಿತ್ತು ಎಂದರೆ ಸರಿಯಲ್ಲ. ಚಾಸಾ 12 ರವರಿಗೆ ತೊಡೆಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ನಂತರ ಅಪಘಾತ ಪಡಿಸಿದ ಕಾರು ಸಂ.ಕೆ ಎ 44 8717 ಎಂದು ಮತ್ತು ಅದರ ಚಾಲಕ ಗುರುಪ್ರಸಾದ್ ಎಂದು ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಂತರ ಅಲ್ಲಿ ಸೇರಿದ್ದ ಜನರು ಎಲ್ಲಾ ಗಾಯಾಳುಗಳನು ಚಿಕಿತ್ಸೆಗೆ ಕಡೂರಿನ ಸ.ಆಸ್ಪತ್ರೆಗೆ ಕಳುಹಿಸಿದರು ಎಂದರೆ ಸರಿಯಲ್ಲ.

ದಿ:24.05.2019 ರಂದು ಪೊಲೀಸರು ನನಗೆ, ಚಾಸಾ 2, 3 ರವರಿಗೆ ನಿಪಿ 3 ರಂತೆ ನೋಟೀಸು ನೀಡಿ ಮಹಜರಿಗೆ ಸಹಕರಿಸಲು ಕೋರಿದರು ಎಂದರೆ ಸರಿಯಲ್ಲ. ಅದೇ ದಿನ ಬೆಳಗ್ಗೆ 10.30 ರಿಂದ 11.15 ರ ವರೆಗೂ ನಾನು ತೋರಿಸಿದ ಜಿ ತಿಮ್ಮಾಪುರ ಗೇಟ್ ಬಳಿ ನಿಪಿ 4 ರಂತೆ ಮಹಜರ್ ಬರೆದು ನಿಪಿ 6, 7 ರಂತೆ ಪೋಟೋ ತೆಗೆದರು ಎಂದರೆ ಸರಿಯಲ್ಲ. ನಂತರ ಪೊಲೀಸ್ ಠಾಣೆಗೆ ಹೋಗಿ ಅಲ್ಲಿ ಬೈಕ್ ಮತ್ತು ಕಾರ್ ಅನ್ನು ಬೆಳಗ್ಗೆ 11.30 ರಿಂದ

12 ಗಂಟೆಯ ತನಕ ಅಮಾನತ್ತು ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

ಈ ಬಗ್ಗೆ ಈಗ ಓದಿ ಹೇಳಿದಂತೆ ದಿನಾಂಕ 24.05.2019 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ಅಲ್ಲಗಳದ ಕಾರಣ, ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಅಪಘಾತದ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹಃ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎಂ ಜಿ ವಕೀಲರಿಂದಃ</u> ಇರುವುದಿಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.